ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ: ಸಿ1(4) ಸಂ.ಹು.ಸೃ. 37/2012-13 ದಿನಾಂಕ: 28-08-2012

## ಅಧಿಕೃತ ಜ್ಞಾಪನ

ವಿಷಯ:-ಕರ್ನಾಟಕ ಲೋಕ ಸೇವಾ ಆಯೋಗದಿಂದ ಮುಖ್ಯ ಶಿಕ್ಷಕರ ಹುದ್ದೆಗಳಿಗೆ ಆಯ್ಕೆಯಾದಂತಹ 629 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಕೊರತೆ ಉಂಟಾಗಿರುವ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಸಂಖ್ಯಾತಿರಿಕ್ತ ಹುದ್ದೆಗಳೆಂದು ಸೃಜಿಸುವ ಬಗ್ಗೆ.

ಉಲ್ಲೇಖ:-1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 51 ಡಿಜಿಟಿ 2005 ದಿ: 30-10-2006.

2. ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:17539 & 17602-653/2010 ರಲ್ಲಿ (ಎಸ್-ಕೆಎಟಿ) ದಿ:16-6-2011 ರಂದು ನೀಡಿರುವ ತೀರ್ಪು.
3. ಮಾನ್ಯ ಉಚ್ಛ ನ್ಯಾಯಾಲಯವು ಪುನರ್ ಪರಿಶೀಲನಾ ಅರ್ಜಿ ಸಂಖ್ಯೆ: 355/2011ರಲ್ಲಿ ದಿನಾಂಕ: 06-01-2012ರಂದು ನೀಡಿರುವ ತೀರ್ಪು.
4. ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು ಇವರ ಅಧಿಸೂಚನೆ ಸಂ:ಇ(4)3305/2010-11/ಪಿ.ಎಸ್.ಸಿ. ದಿನಾಂಕ: 22.02.2011 ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುವ ದಿನಾಂಕ: 17.03.2011
5. ಸರ್ಕಾರದ ಪತ್ರ ಸಂಖ್ಯೆ:ಇಡಿ 01 ಎಸ್ಒಹೆಚ್ 2010 ದಿನಾಂಕ:08.05.2012

– * * * * * * –

ಪ್ರಸ್ತಾವನೆ:-

ಸಾರ್ವಜನಿಕ ಶಿಕ್ಷಣ ಇಲಾಖೆಯ 1967ರ ವೃಂದ ಮತ್ತು ನೇಮಕಾತಿ ನಿಯಮದಂತೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ನೇರ ನೇಮಕಾತಿ ಹಾಗು ಬಡ್ತಿಗೆ 50:50 ಅನುಪಾತ (ದಿನಾಂಕ: 31.10.2006ರವರೆಗೆ) ಇರುತ್ತದೆ. ಸರ್ಕಾರವು ಅಧಿಸೂಚನೆ ಸಂಖ್ಯೆ: ಇಡಿ-51-ಡಿಜಿಟಿ-2005 ದಿ:-30-10-2006ರಲ್ಲಿ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಹೊರಡಿಸಿರುತ್ತದೆ. ನೇರ ನೇಮಕಾತಿ ಹಾಗು ಬಡ್ತಿಗೆ ಈ ಹಿಂದೆ ಇರುವ 50:50 ಅನುಪಾತವನ್ನು 25:75 ಎಂದು ತಿದ್ದುಪಡಿ ಮಾಡಲಾಗಿದ್ದು, ಈ ನಿಯಮಗಳು ಗೆಜೆಟ್‌ನಲ್ಲಿ ಪ್ರಕಟಗೊಂಡ ದಿನಾಂಕ: 31.10.2006ದಿಂದ ಜಾರಿಗೆ ಬರುತ್ತವೆ. ದಿನಾಂಕ: 31.10.2006ರಲ್ಲಿ ತಿದ್ದುಪಡಿ ಮಾಡಲಾದ 25:75 ಪ್ರಮಾಣವನ್ನು 1967 ರಿಂದ ನೀಡುವಂತೆ ಶ್ರೀ ಸತ್ಯನಾರಾಯಣಗುಪ್ತ ಮತ್ತು ಇತರರು ಕರ್ನಾಟಕ ಆಡಳಿತ ನ್ಯಾಯಾ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 658-710/2009ರಂತೆ ದಾವೆ ಹೂಡಿದ್ದು ಈ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ:04.02.2010ರಂದು ತೀರ್ಪು ನೀಡಿರುತ್ತದೆ. ಕರ್ನಾಟಕ ಆಡಳಿತ ನ್ಯಾಯಾ ಮಂಡಳಿಯ ತೀರ್ಪಿನ ಮೇಲೆ ಸರ್ಕಾರವು ಮಾನ್ಯ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಮೇಲ್ಮನವಿಗೆ ಮಾನ್ಯ ನ್ಯಾಯಾಲಯವು ಅರ್ಜಿಸಂಖ್ಯೆ: 17539/2010, 17602-653/2010 (ಎಸ್-ಕೆ.ಎ.ಟಿ) ದಿನಾಂಕ: 16.06.2011 ರಲ್ಲಿ ತೀರ್ಪು ನೀಡಿದ್ದು ದಿನಾಂಕ: 31.10.2006ರಲ್ಲಿದಂತಹ ಖಾಲಿ ಹುದ್ದೆಗಳನ್ನು 31.10.2006ರ ತಿದ್ದುಪಡಿ ನಿಯಮದಂತೆ ವರ್ಗೀಕರಿಸಲು ಆದೇಶಿಸಿರುತ್ತದೆ. ಸದರಿ ನ್ಯಾಯಾಲಯದ ಆದೇಶದ ಮೇಲೆ ಸರ್ಕಾರವು ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪುನರ್ ಪರಿಶೀಲನಾ ಅರ್ಜಿ ಸಂಖ್ಯೆ 355/2011ನ್ನು ಸಲ್ಲಿಸಿದ್ದು, ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯವು ಪುನರ್ ಪರಿಶೀಲನಾ ಅರ್ಜಿಯನ್ನು ದಿನಾಂಕ: 06.01.2012ರಂದು ವಜಾಗೊಳಿಸಿರುತ್ತದೆ.

ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 17539 ಮತ್ತು 17602-653/2010ರಲ್ಲಿ ದಿನಾಂಕ: 16-06-2011ರಲ್ಲಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ತೀರ್ಪನ್ನು ಪುಷ್ಟೀಕರಿಸುತ್ತದೆ. ಅದರಂತೆ ದಿನಾಂಕ: 31-10-2006ರಲ್ಲಿರುವಂತೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳನ್ನು ನೇರ ನೇಮಕಾತಿ ಹಾಗೂ ಬಡ್ತಿ ಅನುಪಾತದಂತೆ 25:75ರಂತೆ ಲೆಕ್ಕಹಾಕಿ ತುಂಬಬೇಕಾಗಿರುತ್ತದೆ. ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾಗಿರುವ 629 ಅಭ್ಯರ್ಥಿಗಳು ಪ್ರಸ್ತುತ ನೇಮಕಾತಿ ನಿರೀಕ್ಷೆಯಲ್ಲಿದ್ದು, ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ದಿನಾಂಕ: 31.10.2006ರಲ್ಲಿದ್ದಂತಹ ಖಾಲಿ ಹುದ್ದೆಗಳನ್ನು ನೇರನೇಮಕಾತಿ ಹಾಗೂ ಬಡ್ತಿಗೆ ವರ್ಗೀಕರಿಸಿದಾಗ ನೇರನೇಮಕಾತಿಗೆ 483 ಹುದ್ದೆಗಳು ಲಭ್ಯವಿದ್ದು ಇನ್ನು 146 ಹುದ್ದೆಗಳ ಕೊರತೆ ಉಂಟಾಗುತ್ತದೆ. ಈ ಕೊರತೆಯ ಹುದ್ದೆಗಳನ್ನು ಸೃಜಿಸಬೇಕಾಗಿರುತ್ತದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಹಾಗೂ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಗಳನ್ನು ತುಂಬಲೇಬೇಕಾಗಿರುತ್ತದೆ. ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾಗಿರುವ ಅಭ್ಯರ್ಥಿಗಳಲ್ಲಿ ಸಾಕಷ್ಟು

ಅಭ್ಯರ್ಥಿಗಳ ವಯೋಮಿತಿ ಮೀರುತ್ತಿದ್ದು ಇತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹರಿರುವುದಿಲ್ಲ. ಈ ಹಿನ್ನೆಲೆಯಲ್ಲಿ ನೇಮಕಾತಿ ಆದೇಶಕ್ಕಾಗಿ ನಿರೀಕ್ಷಿಸುತ್ತಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಕೊರತೆ ಉಂಟಾಗಿರುವ 146 ಹುದ್ದೆಗಳನ್ನು ವೇತನ ಶ್ರೇಣಿ: ರೂ.11400–21600ಕ್ಕೆ ಸಂವಾದಿಯಾಗಿ ಪರಿಷ್ಕೃತ ವೇತನ ಶ್ರೇಣಿ: ರೂ.22800–43200 ರಲ್ಲಿ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಸಂಖ್ಯಾತಿರಿಕ್ತ ಹುದ್ದೆಗಳಾಗಿ ಸೃಜಿಸಲು ಸರ್ಕಾರವು ಉಲ್ಲೇಖ-5ರಲ್ಲಿ ಅನುಮತಿ ನೀಡಿರುತ್ತದೆ. ಸರ್ಕಾರದ ಆದೇಶದಂತೆ 146 ಹುದ್ದೆಗಳಲ್ಲಿ ಪ್ರಸ್ತುತ ಅವಶ್ಯಕತೆಗೆ ಅನುಗುಣವಾಗಿ 104 ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಸಂಖ್ಯಾತಿರಿಕ್ತ ಹುದ್ದೆಗಳನ್ನಾಗಿ ಸೃಜಿಸಲು ತೀರ್ಮಾನಿಸಿ ಈ ಆದೇಶ ಹೊರಡಿಸಲಾಗಿದೆ. ಈ ಹುದ್ದೆಗಳನ್ನು ಕೇವಲ 'ಸಿ' ಈ ವಲಯದಲ್ಲಿ ಮಾತ್ರ ಸೃಜಿಸಲಾಗಿದೆ.

ಆದೇಶ:-

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದಿಂದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗೆ ಆಯ್ಕೆ ಆಗಿ ನೇಮಕಾತಿ ಆದೇಶದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳಿಗೆ ನೇಮಕಾತಿಗಾಗಿ ಅವಕಾಶ ಕಲ್ಪಿಸುವ ಸಲುವಾಗಿ ವೇತನ ಶ್ರೇಣಿ: ರೂ.11400–21600ಕ್ಕೆ ಸಂವಾದಿಯಾಗಿ ಪರಿಷ್ಕೃತ ವೇತನ ಶ್ರೇಣಿ: ರೂ.22800–43200 ರಲ್ಲಿ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ತತ್ಸಮಾನ ಹುದ್ದೆಯಾದ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಪ್ರೌಢ ಶಾಲಾ ವಿಭಾಗದ ಉಪ ಪ್ರಾಂಶುಪಾಲರ 104 (ಒಂದುನೂರ ನಾಲ್ಕು) ಸಂಖ್ಯಾತಿರಿಕ್ತ ಹುದ್ದೆಗಳನ್ನು ಅನುಬಂಧದಲ್ಲಿರುವಂತೆ ಸೃಜಿಸಿ ಆದೇಶಿಸಿದೆ.

ಪ್ರಸ್ತುತ ಸೃಜಿಸಲಾದ ಸಂಖ್ಯಾತಿರಿಕ್ತ ಹುದ್ದೆಗಳು ಯಾವ ಸರ್ಕಾರಿ ನೌಕರನ ಸಲುವಾಗಿ ಸೃಷ್ಟಿಯಾಗಿರುವುದೋ ಅಂತಹ ನೌಕರರಿಗೆ ಮಾತ್ರ ವ್ಯಕ್ತಿಗತವಾದುದಾಗಿದ್ದು ಈ ಹುದ್ದೆಗಳಿಗೆ ಬೇರೆ ಯಾವ ಸರ್ಕಾರಿ ನೌಕರನನ್ನು ನೇಮಕ ಮಾಡಲು ಅವಕಾಶವಿರುವುದಿಲ್ಲ. ಹಾಗೂ ಈ ಹುದ್ದೆಗಳಿಗೆ ನೇಮಕಗೊಂಡ ಸರ್ಕಾರಿ ನೌಕರರು ನಿವೃತ್ತಿ ಹೊಂದಿದ ಕಾರಣದಿಂದ ಅಥವಾ ಬೇರೊಂದು ಹುದ್ದೆಯಲ್ಲಿ ಸ್ಥಿರೀಕೃತಗೊಳ್ಳುವುದರಿಂದ ಅಥವಾ ಬೇರೆ ಯಾವುದೇ ಕಾರಣದಿಂದ ಹುದ್ದೆಯನ್ನು ತೆರವು ಮಾಡಿದ ಕೂಡಲೇ ಹುದ್ದೆಯು ರದ್ದಾಗುತ್ತದೆ. ಅರ್ಥಾತ್ ಅಂಥ ಹುದ್ದೆಗೆ ಯಾವ ಸ್ಥಾನಾಪನ್ನ ಏರ್ಪಾಡುಗಳನ್ನು ಮಾಡಲು ಅವಕಾಶವಿರುವುದಿಲ್ಲವೆಂದು ಆದೇಶಿಸಿದೆ.

(ಕೆ.ಎಸ್. ಪ್ರಭಾಕರ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು:-

1. ಸರ್ಕಾರದ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ ಬಹುಮಡಿ ಕಟ್ಟಡ, ಬೆಂಗಳೂರು
2. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ ಬೆಂಗಳೂರು
3. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ.
8. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪ್ರಾದೇಶಿಕ ಪರೀಕ್ಷಾ ಮಂಡಳಿ. ಮೈಸೂರು, ಬೆಳಗಾವಿ, ಗುಲ್ಬರ್ಗಾ
9. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು.
10. ಸಹ ನಿರ್ದೇಶಕರು-1 ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
11. ರಾಜ್ಯದ ಎಲ್ಲಾ ಸಿ.ಟಿ.ಇ ಪ್ರಾಂಶುಪಾಲರುಗಳಿಗೆ.
12. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ (ಆಡಳಿತ)
13. ರಾಜ್ಯದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರಿಗೆ
14. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ.
15. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
16. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
17. ಸಂಬಂಧಿಸಿದ ಶಾಲಾ/ಕಾಲೇಜು/ಕಛೇರಿ ಮುಖ್ಯಸ್ಥರಿಗೆ.
18. ಕಛೇರಿ ಪ್ರತಿ.

ಸಂಖ್ಯೆ: ಸಿ1(4) ಸಂ.ಹು.ಸೃ : 37/2012-13 ದಿನಾಂಕ: 28-08-2012ರ ಅಧಿಕೃತ ಜ್ಞಾಪನಕ್ಕೆ ಅನುಬಂಧ

| ಕ್ರ.ಸಂ | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಹೆಸರು ಮತ್ತು ವಿಳಾಸ |
|---|---|
| 1 | ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆರೂರ, ಚಿಕ್ಕೋಡಿ, ತಾ: ಚಿಕ್ಕೋಡಿ ಜಿಲ್ಲೆ |
| 2 | ಸರ್ಕಾರಿ ಪದವಿ ಪೂರ್ವ ಕಾಲೇಜು, ತುರುವಿಹಾಳ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ |
| 3 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಕುದೂರು, ಮಾಗಡಿ ತಾ:, ರಾಮನಗರ ಜಿಲ್ಲೆ |
| 4 | ಸರ್ಕಾರಿ ಪದವಿ ಪೂರ್ವ ಕಾಲೇಜು, ಸೋಗಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ |
| 5 | ಸರ್ಕಾರಿ ಪದವಿ ಪೂರ್ವ ಕಾಲೇಜು, ಬೇವೂರು, ಯಲಬುರ್ಗ ತಾಲ್ಲೂಕು, ಕೊಪ್ಪಳ ಜಿಲ್ಲೆ |
| 6 | ಸರ್ಕಾರಿ ಪದವಿ ಪೂರ್ವ ಕಾಲೇಜು, ಮಂಠಾಳ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ |
| 7 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಡಿ.ಪಾಳ್ಯ, ಗೌರಿಬಿದನೂರು ತಾ: ಚಿಕ್ಕಬಳ್ಳಾಪುರ ಜಿಲ್ಲೆ |
| 8 | ಸರ್ಕಾರಿ ಪದವಿ ಪೂರ್ವ ಕಾಲೇಜು, ತೂಬಗೆರೆ, ದೊಡ್ಡಬಳ್ಳಾಪುರ ತಾ: ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 9 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಅಂತರಸಂತೆ, ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ |
| 10 | ಸರ್ಕಾರಿ ಪದವಿ ಪೂರ್ವ ಕಾಲೇಜು, ಇರಕಲ್ ಗಡಾ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆ |
| 11 | ಸರ್ಕಾರಿ ಪದವಿ ಪೂರ್ವ ಕಾಲೇಜು, ಕಕ್ಕೇರಾ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ |
| 12 | ಸರ್ಕಾರಿ ಪದವಿ ಪೂರ್ವ ಕಾಲೇಜು, ಮಣ್ಣೂರು, ಅಫ್ ಜಲ್ ಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ |
| 13 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಹಳ್ಳಿಮೈಸೂರು, ಹೊಳೆನರಸೀಪುರ ತಾ: ಹಾಸನ ಜಿಲ್ಲೆ |
| 14 | ಸರ್ಕಾರಿ ಪದವಿ ಪೂರ್ವ ಕಾಲೇಜು, ಹನಮನಾಳ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ |
| 15 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಯಕ್ಕುಂಡಿ, ಸವದತ್ತಿ, ತಾ: ಬೆಳಗಾವಿ ಜಿಲ್ಲೆ, |
| 16 | ಸರ್ಕಾರಿ ಪದವಿ ಪೂರ್ವ ಕಾಲೇಜು, ಹನುಮಸಾಗರ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ |
| 17 | ಸರ್ಕಾರಿ ಪದವಿ ಪೂರ್ವ ಕಾಲೇಜು, ಜವಲಗೇರಾ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ |
| 18 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಕಿರುಗಾವಲು, ಮಳವಳ್ಳಿ ತಾ: ಮಂಡ್ಯ ಜಿಲ್ಲೆ |
| 19 | ಸರ್ಕಾರಿ ಪದವಿ ಪೂರ್ವ ಕಾಲೇಜು, ಹಿರೇಅರಳಿಹಳ್ಳಿ, ಯಲಬುರ್ಗ ತಾಲ್ಲೂಕು, ಕೊಪ್ಪಳ ಜಿಲ್ಲೆ |
| 20 | ಸರ್ಕಾರಿ ಪದವಿ ಪೂರ್ವ ಕಾಲೇಜು, ರೋಡಲಬಂಡಾ, ಲಿಂಗಸೂಗೂರುತಾಲ್ಲೂಕು, ರಾಯಚೂರು ಜಿಲ್ಲೆ |
| 21 | ಸರ್ಕಾರಿ ಪದವಿ ಪೂರ್ವ ಕಾಲೇಜು, ಬಿಡದಿ, ರಾಮನಗರ ತಾ: ರಾಮನಗರ ಜಿಲ್ಲೆ |
| 22 | ಸರ್ಕಾರಿ ಪದವಿ ಪೂರ್ವ ಕಾಲೇಜು ಉಳ್ಳಾಗಡ್ಡಿ ಖಾನಾಪೂರ, ಹುಕ್ಕೇರಿ, ತಾ: ಚಿಕ್ಕೋಡಿ ಜಿಲ್ಲೆ |
| 23 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಅಂತರಗಂಗೆ, ಭದ್ರಾವತಿ ತಾ: ಶಿವಮೊಗ್ಗ ಜಿಲ್ಲೆ |
| 24 | ಸರ್ಕಾರಿ ಪದವಿ ಪೂರ್ವ ಕಾಲೇಜು, ಕಾಳಗಿ, ಚಿತ್ತಾಪೂರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ |
| 25 | ಸರ್ಕಾರಿ ಪದವಿ ಪೂರ್ವ ಕಾಲೇಜು, ನವಲಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ |
| 26 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಆಲ್ದೂರು, ಚಿಕ್ಕಮಗಳೂರು ತಾ: & ಜಿಲ್ಲೆ |
| 27 | ಸರ್ಕಾರಿ ಪದವಿ ಪೂರ್ವ ಕಾಲೇಜು ಮಳಗಿ, ಮುಂಡಗೋಡ, ತಾ: ಶಿರ್ಸಿ ಶೈಕ್ಷಣಿಕ ಜಿಲ್ಲೆ. |
| 28 | ಸರ್ಕಾರಿ ಪದವಿ ಪೂರ್ವಕಾಲೇಜು,ಪ್ರೌ.ಶಾಲಾವಿಭಾಗ ಯಾಪಲದಿನ್ನಿ,ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ |
| 29 | ಸರ್ಕಾರಿ ಪದವಿ ಪೂರ್ವ ಕಾಲೇಜು ಅಡಹಳ್ಳಿ, ಅಥಣಿ, ತಾ: ಚಿಕ್ಕೋಡಿ ಜಿಲ್ಲೆ |

| ಸಂಖ್ಯೆ: ಸಿ1(4) ಸಂ.ಹು.ಸೃ. : 37/2012-13 ದಿನಾಂಕ: 28-08-2012ರ ಅಧಿಕೃತ ಜ್ಞಾಪನಕ್ಕೆ ಅನುಬಂಧ | |
|---|---|
| ಕ್ರ.ಸಂ | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಹೆಸರು ಮತ್ತು ವಿಳಾಸ |
| 30 | ಸರ್ಕಾರಿ ಪದವಿ ಪೂರ್ವ ಕಾಲೇಜು, ದೇವಲಾಪುರ, ಹೊಸಕೋಟೆ ತಾ: ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 31 | ಸರ್ಕಾರಿ ಪದವಿ ಪೂರ್ವ ಕಾಲೇಜು, ಶ್ರೀರಾಮನಗರ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ |
| 32 | ಸರ್ಕಾರಿ ಪದವಿ ಪೂರ್ವ ಕಾಲೇಜು, ಜಾಲಹಳ್ಳಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ |
| 33 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಸೋಮಯಾಜಿಹಳ್ಳಿ, ಶ್ರೀನಿವಾಸಪುರ ತಾ: ಕೋಲಾರ ಜಿಲ್ಲೆ |
| 34 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಕಾಣಿಯೂರು, ಪುತ್ತೂರು ತಾ, ದಕ್ಷಿಣ ಕನ್ನಡ ಜಿಲ್ಲೆ. |
| 35 | ಸರ್ಕಾರಿ ಪದವಿ ಪೂರ್ವ ಕಾಲೇಜು ಯರಗಟ್ಟಿ, ಹುಕ್ಕೇರಿ, ತಾ: ಚಿಕ್ಕೋಡಿ ಜಿಲ್ಲೆ |
| 36 | ಸರ್ಕಾರಿ ಪದವಿ ಪೂರ್ವ ಕಾಲೇಜು, ಅವರಾದ, ಗುಲ್ಬರ್ಗಾ ಉತ್ತರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ |
| 37 | ಸರ್ಕಾರಿ ಪದವಿ ಪೂರ್ವ ಕಾಲೇಜು, ಚೋರನೂರು, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ |
| 38 | ಸರ್ಕಾರಿ ಪದವಿ ಪೂರ್ವ ಕಾಲೇಜು, ಗುರಗುಂಟಾ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ |
| 39 | ಸರ್ಕಾರಿ ಪದವಿ ಪೂರ್ವ ಕಾಲೇಜು ಚಿಕ್ಕಾಲಗುಂಡಿ, ಬೀಳಗಿ, ತಾ: ಬಾಗಲಕೋಟ ಜಿಲ್ಲೆ |
| 40 | ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌ.ಶಾಲಾ ವಿಭಾಗ ಗಿಲೇಸೂಗೂರು, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ. |
| 41 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ವಿಶ್ವನಾಥಪುರ, ದೇವನಹಳ್ಳಿ ತಾ: ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 42 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಸಿದ್ದರಾಮನಹುಂಡಿ, ಮೈಸೂರು ಗ್ರಾಮಾಂತರ ವಲಯ, ಮೈಸೂರು |
| 43 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಅಳದಂಗಡಿ, ಬೆಳ್ತಂಗಡಿ ತಾ, ದಕ್ಷಿಣ ಕನ್ನಡ ಜಿಲ್ಲೆ. |
| 44 | ಸರ್ಕಾರಿ ಪದವಿ ಪೂರ್ವ ಕಾಲೇಜು, ಕರಜಗಿ, ಅಫ್ ಜಲ್ ಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ |
| 45 | ಸರ್ಕಾರಿ ಪದವಿ ಪೂರ್ವ ಕಾಲೇಜ ವಡೇರಹಹಟ್ಟಿ, ಮುಡಲಗಿ ವಲಯ, ಚಿಕ್ಕೋಡಿ, ಜಿಲ್ಲೆ, |
| 46 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಅರಳಾಳುಸಂದ್ರ, ಚನ್ನಪಟ್ಟಣ ತಾ: ರಾಮನಗರ ಜಿಲ್ಲೆ |
| 47 | ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌ.ಶಾಲಾ ವಿಭಾಗ ಮಟಮಾರಿ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ |
| 48 | ಸರ್ಕಾರಿ ಪದವಿ ಪೂರ್ವ ಕಾಲೇಜು, ಮಸರಕಲ್, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ |
| 49 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಕೊಡಿಯಾಲ, ಶ್ರೀರಂಗಪಟ್ಟಣ ತಾ: ಮಂಡ್ಯ ಜಿಲ್ಲೆ |
| 50 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಡಿ.ಎನ್.ದೊಡ್ಡಿ, ಮಾಲೂರು ತಾ: ಕೋಲಾರ ಜಿಲ್ಲೆ |
| 51 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಬಿಸಲಹಳ್ಳಿ, ಬ್ಯಾಡಗಿ, ತಾ: ಹಾವೇರಿ ಜಿಲ್ಲೆ, |
| 52 | ಸರ್ಕಾರಿ ಪದವಿ ಪೂರ್ವ ಕಾಲೇಜು ಮುಶಿಗೇರಿ, ರೋಣ, ತಾ: ಗದಗ ಜಿಲ್ಲೆ |
| 53 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಹಲಗನಹಳ್ಳಿ, ಪಿರಿಯಾಪಟ್ಟಣ ತಾ: ಮೈಸೂರು ಜಿಲ್ಲೆ |
| 54 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬೂಕನಕೆರೆ, ಕೆ.ಆರ್.ಪೇಟೆ ತಾ: ಮಂಡ್ಯ ಜಿಲ್ಲೆ |
| 55 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಗುಡೇಕೋಟೆ, ಕೂಡ್ಲಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ |

| ಸಂಖ್ಯೆ: ಸಿ1(4) ಸಂ.ಹು.ಸೃ. : 37/2012-13 ದಿನಾಂಕ: 28-08-2012ರ ಅಧಿಕೃತ ಜ್ಞಾಪನಕ್ಕೆ ಅನುಬಂಧ | |
|---|---|
| ಕ್ರ.ಸಂ | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಹೆಸರು ಮತ್ತು ವಿಳಾಸ |
| 56 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ನಾಗರಾಳ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ |
| 57 | ಸರ್ಕಾರಿ ಸಂಯುಕ್ತ ಪದವಿ ಪೂರ್ವ. ಕಾಲೇಜು, ಮಂಡಿಕಲ್ಲು, ಚಿಕ್ಕಬಳ್ಳಾಪುರ ತಾ: & ಜಿಲ್ಲೆ |
| 58 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಗುಡಗೇರಿ, ಕುಂದಗೋಳ, ತಾ: ಧಾರವಾಡ ಜಿಲ್ಲೆ |
| 59 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಶ್ರವಣಬೆಳಗೊಳ, ಚನ್ನರಾಯಪಟ್ಟಣ ತಾ: ಹಾಸನ ಜಿಲ್ಲೆ |
| 60 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಬಮ್ಮಿಗಟ್ಟಿ, ಕಲಘಟಗಿ, ತಾ: ಧಾರವಾಡ ಜಿಲ್ಲೆ |
| 61 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಸುರೇಬಾನ, ರಾಮದುರ್ಗ ತಾ: ಬೆಳಗಾವಿ ಜಿಲ್ಲೆ, |
| 62 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಆಡೂರ, ಹಾನಗಲ್ಲ, ತಾ: ಹಾವೇರಿ ಜಿಲ್ಲೆ, |
| 63 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಸತ್ತಿಗೇರಿ, ಸವದತ್ತಿ, ತಾ: ಬೆಳಗಾವಿ ಜಿಲ್ಲೆ, |
| 64 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಕೋಗಳಿ, ಹೆಚ್.ಬಿ.ಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ |
| 65 | ಸರ್ಕಾರಿ ಪದವಿ ಪೂರ್ವ ಕಾಲೇಜು ಮಮದಾಪೂರ ವಿಜಾಪೂರ, ತಾ: ವಿಜಾಪೂರ, ಜಿಲ್ಲೆ. |
| 66 | ಸರ್ಕಾರಿ ಪದವಿ ಪೂರ್ವ ಕಾಲೇಜು ಬಾಡ, ಹುಕ್ಕೇರಿ, ತಾ: ಚಿಕ್ಕೋಡಿ ಜಿಲ್ಲೆ |
| 67 | ಸ.ಪ.ಪೂ.ಕಾಲೇಜು ಸಜ್ಜಲಗುಡ್ಡ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ |
| 68 | ಸರ್ಕಾರಿ ಪದವಿ ಪೂರ್ವ ಕಾಲೇಜು, ಅವ್ವೇರಹಳ್ಳಿ, ರಾಮನಗರ ತಾ: ರಾಮನಗರ ಜಿಲ್ಲೆ |
| 69 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಶೆಲವಡಿ, ನವಲಗುಂದ, ತಾ: ಧಾರವಾಡ ಜಿಲ್ಲೆ |
| 70 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ನರೋಣಾ, ಆಳಂದ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ |
| 71 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಶ್ಯಾಳ, ಅಫ್ ಜಲ್ ಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ. |
| 72 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಆಲೂರು, ಚಾಮರಾಜನಗರ ತಾ: & ಜಿಲ್ಲೆ |
| 73 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ರಾಯಲ್ಪಾಡು, ಶ್ರೀನಿವಾಸಪುರ ತಾ: ಕೋಲಾರ ಜಿಲ್ಲೆ |
| 74 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ವಕ್ಕುಂದ, ಬೈಲಹೊಂಗಲ, ತಾ: ಬೆಳಗಾವಿ ಜಿಲ್ಲೆ, |
| 75 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಸಗರ, ಶಹಾಪುರ ತಾಲ್ಲೂಕು, ಯಾದಗಿರಿ ಜಿಲ್ಲೆ |
| 76 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬಾಲಕರ ಮಸ್ಕಿ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ |
| 77 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಸಾದಲಿ, ಶಿಡ್ಲಘಟ್ಟ ತಾ: ಚಿಕ್ಕಬಳ್ಳಾಪುರ ಜಿಲ್ಲೆ |
| 78 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಪುರವರ, ಮಧುಗಿರಿ ತಾ: ಮಧುಗಿರಿ ಶೈಕ್ಷಣಿಕ ಜಿಲ್ಲೆ |
| 79 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬೇಳವಾಡಿ, ಅರಕಲಗೂಡು ತಾ: ಹಾಸನ ಜಿಲ್ಲೆ |
| 80 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬಂಡ್ರಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ |
| 81 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಹಿರೇಬಾಗೇವಾಡಿ, ಬೆಳಗಾವಿ, ತಾ: ಬೆಳಗಾವಿ ಜಿಲ್ಲೆ, |
| 82 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬಿ.ಮಟಕೆರೆ, ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ |
| 83 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಶೆಟ್ಟಿಹಳ್ಳಿ, ಶಿವಮೊಗ್ಗ ತಾ: & ಜಿಲ್ಲೆ |

| ಸಂಖ್ಯೆ: ಸಿ1(4) ಸಂ.ಹು.ಸ್ಯ. : 37/2012-13 ದಿನಾಂಕ: 28-08-2012ರ ಅಧಿಕೃತ ಜ್ಞಾಪನಕ್ಕೆ ಅನುಬಂಧ | |
|---|---|
| ಕ್ರ.ಸಂ | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಹೆಸರು ಮತ್ತು ವಿಳಾಸ |
| 84 | ಸರ್ಕಾರಿ ಪದವಿ ಪೂರ್ವ ಕಾಲೇಜು ಯಕ್ಕಂಚಿ, ಸಿಂದಗಿ, ತಾ: ವಿಜಾಪೂರ ಜಿಲ್ಲೆ. |
| 85 | ಸರ್ಕಾರಿ ಪದವಿ ಪೂರ್ವ ಕಾಲೇಜು ಜಲಾಲಪೂರ, ರಾಯಬಾಗ, ತಾ: ಚಿಕ್ಕೋಡಿ ಜಿಲ್ಲೆ |
| 86 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಂದಕನಳ್ಳಿ, ಬೀದರ್ ತಾಲ್ಲೂಕು ಮತ್ತು ಜಿಲ್ಲೆ |
| 87 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಚಿಕ್ಕಾಂಶಿಹೊಸೂರ, ಹಾನಗಲ್ಲ, ತಾ: ಹಾವೇರಿ ಜಿಲ್ಲೆ, |
| 88 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಹಾಗಾಂವ, ಗುಲ್ಬರ್ಗಾ ಉತ್ತರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ |
| 89 | ಸರ್ಕಾರಿ ಪದವಿ ಪೂರ್ವ ಕಾಲೇಜು, ಕುಂಬ್ರ, ಪುತ್ತೂರು ತಾ, ದಕ್ಷಿಣ ಕನ್ನಡ ಜಿಲ್ಲೆ. |
| 90 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಕಮಠಾಣಾ, ಬೀದರ್ ತಾಲ್ಲೂಕು ಮತ್ತು ಜಿಲ್ಲೆ |
| 91 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಹೊಸಬಂಡಿಹರ್ಲಾಪುರ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆ |
| 92 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಕಮಲಾನಗರ, ಆಳಂದ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ |
| 93 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಮೋರಿಗೇರಿ, ಹೆಚ್.ಬಿ.ಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ |
| 94 | ಸರ್ಕಾರಿ ಸಂಯುಕ್ತ ಪದವಿಪೂರ್ವಕಾಲೇಜು, ಕೋಡಂಬಳ್ಳಿ, ಚನ್ನಪಟ್ಟಣ ತಾ: ರಾಮನಗರ ಜಿಲ್ಲೆ |
| 95 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಕಮಡೊಳ್ಳಿ, ಕುಂದಗೋಳ, ತಾ: ಧಾರವಾಡ ಜಿಲ್ಲೆ |
| 96 | ಸರ್ಕಾರಿ ಪದವಿ ಪೂರ್ವ ಕಾಲೇಜು ಸೊರಟೂರ, ಗದಗ, ತಾ: ಗದಗ ಜಿಲ್ಲೆ |
| 97 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಬೆಳ್ಳಾಳೆ, ಪಾಂಡವಪುರ ತಾ: ಮಂಡ್ಯ ಜಿಲ್ಲೆ |
| 98 | ಸರ್ಕಾರಿ ಪದವಿ ಪೂರ್ವ ಕಾಲೇಜು ಜಾಲವಾದ (ಕನ್ನಡ), ಸಿಂದಗಿ, ತಾ: ವಿಜಾಪೂರ ಜಿಲ್ಲೆ. |
| 99 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಂದೇವಾಲ, ಜೇವರ್ಗಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ |
| 100 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಅರಳಕುಪ್ಪೆ,, ಪಾಂಡವಪುರ ತಾ: ಮಂಡ್ಯ ಜಿಲ್ಲೆ |
| 101 | ಸರ್ಕಾರಿ ಪದವಿ ಪೂರ್ವ ಕಾಲೇಜು ನದಿಇಂಗಳಗಾಂವ, ಅಥಣಿ, ತಾ: ಚಿಕ್ಕೋಡಿ ಜಿಲ್ಲೆ |
| 102 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಶ್ರೀರಾಂಪುರ, ಹೊಸದುರ್ಗ ತಾ: ಚಿತ್ರದುರ್ಗ ಜಿಲ್ಲೆ |
| 103 | ಸರ್ಕಾರಿ ಪದವಿ ಪೂರ್ವ ಕಾಲೇಜು ನಾಗರಾಳ, ಮುಧೋಳ, ತಾ: ಬಾಗಲಕೋಟ ಜಿಲ್ಲೆ |
| 104 | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಕಿತ್ತೂರು, ಪಿರಿಯಾಪಟ್ಟಣ ತಾ: ಮೈಸೂರು ಜಿಲ್ಲೆ |

(ಕೆ. ಎಸ್.ಪ್ರಭಾಕರ)

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ